**CFC.R.P.67** ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ**,** ಕೊಪ್ಪಳ

<u>ಎಸ್ .ಸಿ. ನಂ: **54/2017**</u>

| Form No.4(Civil)<br>(R.P.No.57) |
|---|

ಪಿ.ಡಬ್ಲ್ಯೂ ನಂ: **01**
ಸಿ.ಡಬ್ಲ್ಯೂ ನಂ: **01**
ಸಾಕ್ಷಿಯನ್ನು ದಿನಾಂಕ: **29-07-2025**
ರಂದು ಪ್ರತಿಜ್ಞೆ ಮಾಡಿಸಲಾಯಿತು

| | | |
|---|---|---|
| ಸಾಕ್ಷಿದಾರನ ಹೆಸರು | : | ರೇಣುಕಾ |
| ಗಂಡ ಹೆಸರು | : | ತಿಮ್ಮೇಗೌಡ |
| ವಯಸ್ಸು | : | **42** ವರ್ಷ |
| ಉದ್ಯೋಗ | : | ಗೃಹಿಣಿ |
| ವಾಸ ಸ್ಥಳ | : | ತಿಪಟೂರು |

<u>ಸಾಕ್ಷಿಯ ಮುಖ್ಯ ವಿಚಾರಣೆ **:** ಸರ್ಕಾರಿ ಅಭಿಯೋಜಕರವರಿಂದ</u>

ಚಾಸಾ-**6** ರಿಂದ **8** ನನ್ನ ಅಣ್ಣಂದಿರು, ಚಾಸಾ-**9** ಮತ್ತು **10** ನನ್ನ ಅತ್ತಿಗೆಯರು. ನನಗೆ ಈ ಕೇಸಿನ ಆರೋಪಿತರು ಗೊತ್ತು. **2016** ರಲ್ಲಿ ನಾನು ಕುಕನೂರಿನ ಖಾಸಗೀ ಶಾಲೆಯಲ್ಲಿ ಸಹ ಶಿಕ್ಷಕಿಯಾಗಿ ಕೆಲಸ ಮಾಡುತ್ತಿದ್ದೆ. ಆರೋಪಿಗಳು ಅಕ್ರಮವಾಗಿ ಕಟ್ಟಡ ಕಟ್ಟುವ ವಿಚಾರದಲ್ಲಿ ಅವರ ಹಾಗೂ ನಮ್ಮ ಅಣ್ಣಂದಿರ ಮದ್ಯೆ ಗಲಾಟೆಯಾಗುತ್ತಿತ್ತು. ಕುಕನೂರು ಪಟ್ಟಣ ಪಂಚಾಯತಿಗೆ ತಕರಾರು ಅರ್ಜಿ ಕೊಡಲಾಗಿತ್ತು ಮತ್ತು ಯಲಬುರ್ಗಾ ಕೋರ್ಟನಲ್ಲಿ ಕೇಸ್ ಹಾಕಿದ್ದೆವು.

**2.** ದಿನಾಂಕ: **06-10-2016** ರಂದು ಸಂಜೆ **5-00** ಗಂಟೆಗೆ ಆರೋಪಿಗಳು ಅಕ್ರಮವಾಗಿ ಕಟ್ಟುತ್ತಿದ್ದ ಕಟ್ಟಡದ ಪಕ್ಕ ನಡೆದುಕೊಂಡು ಹೋಗುತ್ತಿದ್ದಾಗ ಹನುಮಂತಪ್ಪ, ಮಲ್ಲಪ್ಪ, ದೇವಪ್ಪ, ಮಹಾಂತೇಶ, ಶೇಖರಪ್ಪ, ವಿರುಪಾಕ್ಷಪ್ಪ, ಲಕ್ಷ್ಮಣ, ಸಂತೋಷ, ಈರಪ್ಪ ಗುತ್ತಿ, ಬಸವಣ್ಣೆವ್ವ, ರೇಖಾ, ಶಿವಲೀಲಾ, ಲಕ್ಷ್ಮೀ, ಇನ್ನೊಬ್ಬ ದೇವಪ್ಪ ಇಷ್ಟು ಜನ ನನ್ನ ಮೇಲೆ ದಾಳಿ ಮಾಡಿ ಸೂಳೆ ಎಂದು ಕಟ್ಟುದಾಗಿ ಬೈದು, ಚಪ್ಪಲಿಯಿಂದ ಹೊಡೆದು ನನ್ನ ಕೊರಳಲ್ಲಿ ಇದ್ದ **10** ಗ್ರಾಂ ಬಂಗಾರದ ಚೈನ್, ಒಂದು ಸ್ಯಾಂಮ್‌ಸಂಗ್ ಮೊಬೈಲ್ ಕಿತ್ತು ಕೊಂಡರು. ನನ್ನ ಅತ್ತಿಗೆ ಶೈಲ ನನ್ನನ್ನು ಬಿಡಿಸಿಕೊಳ್ಳಲು ಬಂದರು. ಅವರಿಗೂ ಸಹ ಸೂಳೆ,

ಬೋಸಡಿ ಎಂದು ಬೈದು ಚಪ್ಪಲಿಯಿಂದ ಹೊಡೆದರು. ನನ್ನ ತಂದೆ ತಾಯಿ ವಿರುಪಾಕ್ಷಪ್ಪ ಮತ್ತು ಪಾರ್ವತಮ್ಮ ಅವರಿಗೂ ಸಹ ಕೈಗಳು ಅಡ್ಡ ಹಿಡಿದರೂ ಸಹ ಕೈಗಳನ್ನು ಕಿತ್ತು ಚಪ್ಪಲಿಯಿಂದ ಅವರ ಮುಖಕ್ಕೆ ಹೊಡೆದರು. ಆಗ ನನ್ನ ಅಣ್ಣ ಪ್ರಕಾಶ ಬಿಡಿಸಿಕೊಳ್ಳಲು ಬಂದಾಗ ಅತನನ್ನು ಸಹ ಚಪ್ಪಲಿಯಿಂದ ಹೊಡೆದರು.

3. ಅದೇ ದಿನ ಈ ವಿಚಾರದಲ್ಲಿ ಸ್ಟೇ ತರಲು ಧಾರವಾಡದ ಮಾನ್ಯ ಉಚ್ಚ ನ್ಯಾಯಾಲಯಕ್ಕೆ ನನ್ನ ಇನ್ನೊಬ್ಬ ಅಣ್ಣ ಈರಣ್ಣ ಇವರಿಗೆ ನಾನು ಫೋನ್ ಮಾಡಿ ಗಲಾಟೆ ಆದ ವಿಚಾರ ತಿಳಿಸಿದೆ. ಪೊಲೀಸ್ ಠಾಣೆಗೆ ಫೋನ್ ಮಾಡಿ ಆ ವಿಚಾರ ತಿಳಿಸುವುದಾಗಿ ನನಗೆ ಹೇಳಿದರು. ಆದರೆ ಎಷ್ಟು ಹೊತ್ತು ಆದರೂ ಮನೆಗೆ ಪೊಲೀಸರು ಬರಲಿಲ್ಲ. ನಂತರ ನಾನು, ನನ್ನ ಅಣ್ಣ ಪ್ರಕಾಶ ಮತ್ತು ಅತ್ತಿಗೆ ಶೈಲಾ ಕೂಡಿಕೊಂಡು ಪೊಲೀಸ್ ಠಾಣೆಗೆ ಹೋದೆವು. ಅಲ್ಲಿ ಶರಣಪ್ಪ ಗೂಳರೆಡ್ಡಿ ಇದ್ದು ಅವರು ಕಂಪ್ಲೇಂಟ್ ತೆಗೆದುಕೊಳ್ಳಲಿಲ್ಲ. ನನ್ನ ಅಣ್ಣ ಈರಣ್ಣನನ್ನು ಕುರಿತು ಎಸ್.ಪಿ. ಸಾಹೇಬರಿಗೆ ದೂರು ಕೊಡುವುದಾಗಿ ಹೇಳುತ್ತಿದ್ದಾನೆ ಬರಲಿ ಆ ಸೂಳೆ ಮಗ ಅವರು ಬಂದ ಮೇಲೆ ಅವನಿಗೆ ಮಾಡುತ್ತೇನೆ ಎಂದು ಬೈದರು. ನೋಡುತ್ತೇನೆ ಒಂದು ಕೈ ಎಂದು ಬೈದು ಗಾಯಗೊಂಡ ನಮ್ಮ 3 ಜನರನ್ನು ಕುಕನೂರು ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿರುತ್ತಾರೆ.

4. ಸಂಜೆ 7-30 ಗಂಟೆಗೆ ಧಾರವಾಡದಿಂದ ನನ್ನ ಅಣ್ಣ ಈರಣ್ಣ ಆಸ್ಪತ್ರೆ ಬಳಿ ಬಂದರು. ವಾಪಾಸ್ಸು ಮನೆ ಬಳಿ ಏನಾಗಿದೆ ಎಂದು ನೋಡಲು ನಮ್ಮ ಮನೆ ಕಡೆ ಹೋದರು. ನಾವು ಆಸ್ಪತ್ರೆಯಲ್ಲಿ ಇದ್ದೆವು. ನಮಗೆ ಚಿಕಿತ್ಸೆ ಕೊಟ್ಟು ವೈದ್ಯರು ಮನೆಗೆ ಹೋಗುವಂತೆ ಕಳುಹಿಸಿದರು. ನಂತರ ನಾನು, ನನ್ನ ಅತ್ತಿಗೆಯರಾದ ಸಂಧ್ಯ ಮತ್ತು ಶೈಲ ಕಟ್ಟೆಯ ಮೇಲೆ ಮಾತಾಡುತ್ತಾ ಮನೆಯ ಮುಂದೆ ಕುಳಿತಿದ್ದಾಗ ಮತ್ತೆ ಇದೇ 16 ಜನ ಬಂದು ಲೇ ಸೂಳೇರಾ ನೀವು ತಕರಾರು ಮಾಡಿದ ಪ್ಲಾಟ್ ನಲ್ಲಿ ಕಟ್ಟಡ ಕಟ್ಟುತ್ತೇವೆ ಏನು ಮಾಡಿಕೊಳ್ಳುತ್ತೀರಾ ಮಾಡಿಕೊಳ್ಳಿ ಎಂದು ಹೇಳಿ ಹನುಮಂತಪ್ಪ ಬಂದು ನನ್ನ ಸೀರೆಯನ್ನು ಎಳೆದಾಡಿ ಚಪ್ಪಲಿಯಿಂದ ನನ್ನ ಮುಖಕ್ಕೆ ಹೊಡೆದ. ಬಿಡಿಸಲು ಬಂದ ನನ್ನ ಅತ್ತಿಗೆ ಶೈಲಳಿಗೆ ಮಹಾಂತೇಶ ಎಂಬಾತ ಆಕೆಯ ಮೈ ಕೈ ಮುಟ್ಟಿ ಬೆನ್ನಿಗೆ ಗುದ್ದಿದ. ರೇಖಾ ಚಪ್ಪಲಿಯಿಂದ ನನ್ನ ತಲೆಗೆ ಹೊಡೆದು ಎಡಗೈ ಮುಂಗೈ ಕಚ್ಚಿದಳು. ಪಟ್ಟಣ ಪಂಚಾಯತಿ ಸದಸ್ಯ ದೇವಪ್ಪ ಇವರು ನನ್ನ ಅತ್ತಿಗೆ ಶೈಲಾ ಇವಳಿಗೆ ಕೈಯಿಂದ ಬೆನ್ನಿಗೆ ಮತ್ತು ತಲೆಗೆ

ಹೊಡೆದ. ನನ್ನ ಅಣ್ಣ ಪ್ರಕಾಶ ಮೋಟಾರ ಸೈಕಲ ಮೇಲೆ ಮನೆಯ ಹತ್ತಿರ ಬಂದಾಗ ವಿರುಪಾಕ್ಷಪ್ಪ, ಹನುಮೇಶ, ಮಹಾಂತೇಶ ಇವರು ಮೋಟಾರ ಸೈಕಲಗೆ ಒದ್ದಾಗ ನನ್ನ ಅಣ್ಣ ಕೆಳಗೆ ಬಿದ್ದ. ಆಗ ಅವರು ಕೈಗಳಿಂದ ಅತನ ಮೇಲೆ ಹಲ್ಲೆ ಮಾಡಿದರು. ಆಗ ನನ್ನ ಅಣ್ಣನಿಗೆ ಎಡಗಾಲ ಪಾದದ ಕೆಳಗೆ ತರಚಿದ ಗಾಯ, ಬಲಗಾಲ ಪಾದದ ಒಳಪೆಟ್ಟು ಆಗುತ್ತದೆ. ಆತನನ್ನು ಬಿಡಿಸಿಕೊಳ್ಳಲು ಶಿವಸಂಗಪ್ಪ ಮತ್ತು ಈರಪ್ಪ ಬಂದರು. ಆಗ ಶಿವಸಂಗಪ್ಪನ ಜೊತೆ ಹನುಮಪ್ಪ ಮತ್ತು ಶೇಖಪ್ಪ ತೆಕ್ಕಿಮುಕ್ಕಿ ಬಿದ್ದು ಅದರಲ್ಲಿ ಶೇಖಪ್ಪ ಶಿವಸಂಗಪ್ಪನ ಬಾಯಿಗೆ ಗುದ್ದಿದ ಹನುಮಂತಪ್ಪ ಚಪ್ಪಲಿ ತೆಗೆದುಕೊಂಡು ಅವರ ಬೆನ್ನಿಗೆ ಹೊಡೆದ ನಂತರ ನನ್ನ ಅಣ್ಣ ಈರಪ್ಪನೊಂದಿಗೆ ಹನುಮಂತಪ್ಪ, ದೇವಪ್ಪ, ಪಟ್ಟಣ ಪಂಚಾಯತಿ ಸದಸ್ಯ ದೇವಪ್ಪ, ಮಲ್ಲಪ್ಪ ಇವರು ತೆಕ್ಕಿಮುಕ್ಕಿ ಬಿದ್ದು ಕೆಳಗೆ ಕೆಡವಿ ಈ ಸೂಳೆ ಮಗನಿಂದ ಇಷ್ಟೆಲ್ಲ ಆಗಿದ್ದು ಎಂದು ಕೆಳಗೆ ಬೀಳಿಸಿ ದೇವಪ್ಪ ನನ್ನ ಅಣ್ಣನ ಪ್ಲಾಸ್ಟಿಕ ಕಾಲು ಕೀಳುತ್ತಾನೆ. ಆಗ ಪಟ್ಟಣ ಪಂಚಾಯತಿ ಸದಸ್ಯ ದೇವಪ್ಪ ನನ್ನ ಅಣ್ಣ ಈರಣ್ಣನನ್ನು ಕೊಲೆ ಮಾಡುವ ಉದ್ದೇಶದಿಂದ ಕುತ್ತಿಗೆ ಹಿಸುಕಿದ ಕಾರಣ ಆತನಿಗೆ ಗಾಯಗಳಾದವು. ನಂತರ ಬಸವರಾಜ ಜೋಗಿನ ಕೈಯಿಂದ ನನ್ನ ಅಣ್ಣನ ತಲೆಗೆ ಹೊಡಿತಾ ಇದ್ದ. ಬಸವಣ್ಣೆವ, ಲಕ್ಷ್ಮೀ, ಲಕ್ಷ್ಮಣ, ಸಂತೋಷ, ಈರಪ್ಪ ಗುತ್ತಿ ಇವರು ಈರಣ್ಣನನ್ನು ಕೊಲೆ ಮಾಡಿ ಬಿಡಬೇಡಿ ಎಂದು ಪ್ರಚೋದನೆ ಮಾಡುತ್ತಿದ್ದರು.

**5.** ಇದನ್ನು ನೋಡಿ ನನ್ನ ತಂದೆ ವಿರುಪಾಕ್ಷಪ್ಪ ಬಿಡಿಸಿಕೊಳ್ಳಲು ಬಂದಾಗ ಅವರನ್ನು ಮಹಾಂತೇಶ, ಶೇಖಪ್ಪ ತೆಕ್ಕಿಮುಕ್ಕಿ ಬಿದ್ದು ಕೆಳಗೆ ಕೆಡವಿದರು. ಅದರಲ್ಲಿ ಮಹಾಂತೇಶ ನನ್ನ ತಂದೆಯ ಕೈ ಹಿಡಿದಾಗ ಶೇಖಪ್ಪ ನನ್ನ ತಂದೆಯ ತಲೆಗೆ ಬಡಿಗೆಯಿಂದ ಹೊಡೆಯಲು ಹೋದಾಗ ಅವರು ತಪ್ಪಿಸಿಕೊಂಡಾಗ ಬಲಗಾಲ ಮಂಡೆಗೆ ಪದೇ ಪದೇ ಕಟ್ಟಿಗೆಯಿಂದ ಹೊಡೆದ. ಅವರಿಗೆ ಕಾಲು ಮುರಿದ ಪರಿಣಾಮ ಎದ್ದೇಳಲು ಆಗಲಿಲ್ಲ. ನಂತರ ಅಲ್ಲಿ ಇದ್ದ ಬಸವರಾಜ ಹಾಲಕೇರಿ, ಬಸವರಾಜ ಮಾಳಪ್ಪ ಮೇಟಿ, ಬಸನೌಡ, ಮಲ್ಲಪ್ಪ ಜಗಳವನ್ನು ಬಿಡಿಸಿ ಪೊಲೀಸ್ ಠಾಣೆಗೆ ಪೋನ್ ಮಾಡಿ ಹೇಳಿದರು. ಆಗ ಪಿ.ಎಸ್.ಐ ವಿಶ್ವನಾಥ ಹಿರೇಗೌಡ ಸ್ಥಳಕ್ಕೆ ಬಂದು ಆ್ಯಂಬುಲೆನ್ಸಿಗೆ ಕರೆ ಮಾಡಿ ನನ್ನ ತಂದೆಯನ್ನು ಕುಕನೂರು ಆಸ್ಪತ್ರೆಗೆ ಕಳುಹಿಸಿಕೊಟ್ಟರು. ಅಲ್ಲಿಂದ ಅವರನ್ನು ಕೊಪ್ಪಳ ಜಿಲ್ಲಾ ಆಸ್ಪತ್ರೆಗೆ

ಕಳುಹಿಸಿಕೊಟ್ಟರು. ಅಲ್ಲಿಂದ ಹುಬ್ಬಳ್ಳಿ ಕೆ.ಎಂ.ಸಿ. ಆಸ್ಪತ್ರೆಗೆ ಕಳುಹಿಸಿದರು. ಅಲ್ಲಿ ನನ್ನ ತಂದೆಯ ಪೆಟ್ಟಾಗಿದ್ದ ಕಾಲನ್ನು ಕತ್ತರಿಸಿ ತೆಗೆದರು. ಆದರೂ ಅವರು ಗುಣಮುಖರಾಗದೆ ಅದೇ ಆಸ್ಪತ್ರೆಯಲ್ಲಿ ದಿನಾಂಕಃ **31-12-2016** ರಂದು ತೀರಿಕೊಂಡರು.

**6.** ಗಲಾಟೆ ಸಂಜೆ **7-30** ಗಂಟೆಗೆ ಆಗಿದ್ದರೂ ಸಹ ಸಂಜೆ **5-30** ಗಂಟೆಗೆ ಗಲಾಟೆಯಾಗಿದೆ ಎಂದು ಕೇಸ್ ಮಾಡಿರುತ್ತಾರೆ. ಕೌಂಟರ ಕೇಸ್ ಮಾಡಬೇಕು ಎಂದು ಆ ರೀತಿ ಮಾಡಿರುತ್ತಾರೆ. ಪೊಲೀಸರು ಆ ಸಮಯ ನಮಗೆ ಸಹಾಯ ಮಾಡದೆ ಆರೋಪಿಗಳಿಗೆ ಸಹಾಯ ಮಾಡಿರುತ್ತಾರೆ. ಅವರಿಗೆ ಯಾವುದೇ ಗಾಯಗಳು ಆಗದೇ ಇದ್ದರೂ ನೀವು ಆಸ್ಪತ್ರೆಗೆ ಹೋಗಿ ತೋರಿಸಿಕೊಂಡು ಬಂದು ಕಂಪ್ಲೇಂಟ್ ಕೊಡಿ ಎಂದು ಪಿ.ಎಸ್.ಐ. ವಿಶ್ವನಾಥ ಹೇಳಿದರು. ನಮಗೆ ಅನ್ಯಾಯ ಆಗಿದ್ದ ಕಾರಣ ಮಾನವ ಹಕ್ಕು ಆಯೋಗಕ್ಕೆ ದೂರು ಕೊಟ್ಟೆವು. ನಮ್ಮ ಅಣ್ಣ ಈರಣ್ಣ ಸಂಜೆ **5-30** ಗಂಟೆಗೆ ಕುಕೂನೂರಿನಲ್ಲಿ ಇದ್ದ ಎಂದು ಪಿ.ಎಸ್.ಐ ರವರು ಕೇಸು ಮಾಡಿದ್ದಾರೆ ಆದರೆ ಆ ಸಮಯ ಅವರು ಧಾರವಾಡದಲ್ಲಿ ಇದ್ದರು. ಇದೇ ಕೇಸಿನ ಸಂಬಂಧ ನನ್ನ ಅಣ್ಣ ಈರಪ್ಪ ವಣಗೇರಿ ಇತ ಕುಕನೂರಿನಲ್ಲಿ ಇದ್ದ ಎಂದು ದೂರಿನಲ್ಲಿ ಸೇರಿಸಿ ಪಿ.ಎಸ್.ಐ ರವರು ಆತನನ್ನು ಜೈಲಿಗೆ ಕಳಿಸಿದ್ದರು. ಮಾನವ ಹಕ್ಕು ಆಯೋಗದವರು ತನಿಖೆ ಮಾಡಿ ನನ್ನ ಅಣ್ಣ ಆ ಸಮಯ ಧಾರವಾಡದಲ್ಲಿ ಇದ್ದರು ಎಂದು ತನಿಖೆಯಲ್ಲಿ ಸಾಬೀತಾಗಿದೆ ಹಾಗೂ ಈ ಬಗ್ಗೆ ದಾಖಲೆಗಳು ನನ್ನ ಬಳಿ ಇವೆ.

**7.** ಆರೋಪಿತರು ಅಕ್ರಮವಾಗಿ ಕಟ್ಟಡ ಕಟ್ಟುತ್ತಿದ್ದ ಜಾಗ ನ್ಯಾಯಾಲಯದಲ್ಲಿ ನಮ್ಮ ಪರವಾಗಿ ಆಗಿದೆ. ನಮ್ಮ ಅಪ್ಪನಿಗೆ ಈ ರೀತಿ ಆದ ಕಾರಣ ನ್ಯಾಯ ಒದಗಿಸಿಕೊಡಿ. ಸಂಜೆ **5-30** ಗಂಟೆಗೆ ನಾವು ಠಾಣೆಗೆ ಹೋದಾಗ ಪೊಲೀಸರು ದೂರು ತೆಗೆದುಕೊಳ್ಳಲಿಲ್ಲ. ಮೊದಲನೇ ಗಲಾಟೆ ಸಂಜೆ **5-30** ಗಂಟೆಗೆ ಆಯಿತು. ಎರಡನೇ ಗಲಾಟೆ ಸಂಜೆ **7-30** ಗಂಟೆಗೆ ಆಯಿತು. ಆರೋಪಿಗಳಿಗೆ ಸಹಾಯ ಮಾಡುವ ಉದ್ದೇಶದಿಂದ ರಾಜಕೀಯದಿಂದ **7-30** ಆದ ಗಲಾಟೆಯನ್ನು ಅವರೇ ಟೈಪ್ ಮಾಡಿದ ದೂರಿನಲ್ಲಿ **5-30** ಎಂದು ತೋರಿಸಿ ಸಹಿ ಮಾಡುವಂತೆ ಬೈದಾಡಿ ಒತ್ತಾಯದಿಂದ ಸಹಿ ಮಾಡಿಸಿಕೊಂಡರು. ಪೊಲೀಸರೇ ಟೈಪ್ ಮಾಡಿ

ಒತ್ತಾಯದಿಂದ ನನ್ನ ಸಹಿ ಪಡೆದುಕೊಂಡ ದೂರು ಈಗ ನೋಡಿದ ದಾಖಲೆಯಾಗಿದ್ದು ಅದನ್ನು ನಿಪಿ-1 ಎಂದು ಸಾಕ್ಷಿದಾರರ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

**8.** ಆ ದೂರಿನಲ್ಲಿ 2 ನೇ ಘಟನೆಯನ್ನು ಮಾತ್ರ ತೋರಿಸಿ ಮೊದಲಿಗೆ ಆದ ಘಟನಯನ್ನು ತೋರಿಸಿರುವುದಿಲ್ಲ. ನಂತರ ಪಿ.ಎಸ್.ಐ ರವರು ಸಂಜೆ 7-30 ಗಂಟೆಗೆ ಘಟನೆ ಆಗಿದೆ ಎಂದು ಮಾನವ ಹಕ್ಕು ಆಯೋಗದಲ್ಲಿ ಬರೆದು ಕೊಟ್ಟಿದ್ದಾರೆ. ನಮ್ಮ ತಂದೆ ಸಾವಿಗೆ 16 ಜನ ಆರೋಪಿಗಳು ಕಾರಣರಾಗಿದ್ದು ನ್ಯಾಯ ಕೊಡಿಸಿ.

**9.** ಹಲ್ಲೆ ಮಾಡಲು ಆರೋಪಿಗಳು ಉಪಯೋಗಿಸಿದ ಚಪ್ಪಲಿಗಳು ಮತ್ತು ಕಟ್ಟಿಗೆ ನೋಡಿದರೆ ಗುರುತಿಸಬಲ್ಲೆ. ಸ್ವತ್ತು ಪಟ್ಟಿ ಸಂಖ್ಯೆ: 66/2016 ರಲ್ಲಿ ಇರುವ ಐಟೆಂ ನಂ: 1 ರಿಂದ 3 ಇವುಗಳನ್ನು ಸಾಕ್ಷಿದಾರರು ನೋಡಿ ಗುರುತಿಸಿದ್ದು ಅವುಗಳನ್ನು ಮು.ಮಾ-1 ರಿಂದ 3 ಎಂದು ಗುರುತಿಸಲಾಯಿತು.

( ಮುಖ್ಯ ವಿಚಾರಣೆಯಲ್ಲಿ ದಾಖಲಾಗಿರುವ ಸಾಕ್ಷ್ಯ ಸ್ವತಃ ಸಾಕ್ಷಿದಾರರೆ ಅಭಿಯೋಜಕರ ಸಹಾಯವಿಲ್ಲದೆ ನುಡಿದಿರುತ್ತಾರೆ.)

ಪಾಟೀ ಸವಾಲು : ಆರೋಪಿತರ ಪರ ವಕೀಲರಿಂದ

(ಆರೋಪಿ ಪರ ವಕೀಲರು ಹಾಜರಿದ್ದು, ಪಾಟೀ ಸವಾಲು ಮಾಡಲು ಸಮಯಾವಕಾಶ ಕೋರಿರುತ್ತಾರೆ. ಈ ಪ್ರಕರಣ 5 ವರ್ಷಗಳ ಹಳೇ ಪ್ರಕರಣವಾಗಿದ್ದು ಯಾವುದೇ ಸಮಂಜಸವಾದ ಕಾರಣ ನೀಡದೇ ಇರುವುದರಿಂದ ಕೋರಿಕೆಯನ್ನು ತಿರಸ್ಕರಿಸಿ ಸಾಕ್ಷಿದಾರರ ಪಾಟೀ ಸವಾಲು ಏನೂ ಇರುವುದಿಲ್ಲ ಎಂದು ತೆಗೆದುಕೊಳ್ಳಲಾಯಿತು.)

ಮರು ವಿಚಾರಣೆ ಇಲ್ಲ.

(ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತ ಉಲ್ಲೇಖನದ ಮೇರೆಗೆ ಸಾಕ್ಷ್ಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

(ಚಂದ್ರಶೇಖರ ಸಿ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೊಪ್ಪಳ